ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ
ವರುಣಾ ಕಾಲುವೆ ಕಾಮಗಾರಿ

೬೮೮. ಶ್ರೀ ಜಿ. ಮಾದೇಗೌಡ (ಕಿರುಗಾವಲು).— ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿನ ವರುಣಾ ನಾಲ ವಿರೋಧಿ ಚಳುವಳಿಯು ಪಣಾರಿಮವಾಗಿ ಅಂದಿನ ಸರ್ಕಾರವು ಕಾವೇರಿ ಶಾಖೆಯಂ ತುದಿ ಹಂತದ ಅಚ್ಚು ಕಟ್ಟಿಗೆ ನೀರು ಸರಬರಾಜು ಮಾಡಲು ಸಂಪರ್ಕ ಕಾಲುವೆಯನ್ನು ನಿರ್ಮಿಸುವ ನಿರ್ಧಾರವನ್ನು ಕೈಗೊಂಡಿತ್ತು ನಿಜವಲ್ಲವೆ?

ಆ) ಮೇಲಿನ ಕಾಮಗಾರಿಗಾಗಿ ಇದುವರೆಗೆ ಮಾಡಲಾಗಿರುವ ವೆಚ್ಚ?

ಇ) ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾಗುವ ಅವಧಿ ಮತ್ತು ತಗಲಬಹುದಾದ ವೆಚ್ಚ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಜೂನ್ ೧೯೮೫ರ ಅಂತ್ಯದವರೆಗೆ ಸಂಪರ್ಕಕಾಲುವೆಯ ಕಾಮಗಾರಿಯ ಮೇಲಿನ ವೆಚ್ಚ ೧೮೭ ಲಕ್ಷ ರೂಪಾಯಿಗಳು.

ಇ) ಸಂಪರ್ಕ ಕಾಲುವೆಯ ಕಾಮಗಾರಿಗಳನ್ನು ಸಿಗಬಹುದಾದ ಆನುದಾನವನ್ನು ಅವಲಂಬಿಸಿ ಸುಮಾರು ೫ ವರ್ಷಗಳಲ್ಲಿ ಅಂದರೆ ೧೯೯೯-೯೦ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಈ ಕೆಲಸವನ್ನು ಪೂರ್ಣಗೊಳಿಸಲು ೧೬೨೩ ಲಕ್ಷ ರೂಗಳು ಬೇಕಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ಮತ್ತು ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ವಿಧವೆಯರಿಗೆ ಮಾಸಾಶನ ಕುರಿತಂ.

೬೮೦. ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸರಕಾರ ಜಾರಿಗೆ ತಂದಿರುವ ವಿಧವೆಯರಿಗೆ ಮಾಸಾಶನ ಎಂಬ ಯೋಜನೆಯಡಿಯಲ್ಲಿ ವಿಧವೆಯರಿಗೆ ಮಾಸಾಶನ ನೀಡಲು ಇರುವ ಸ್ಪಷ್ಟ ನಿಯಮಗಳೇನು?

ಆ) ಈ ಯೋಜನೆಯಡಿಯಲ್ಲಿ ಸರಕಾರದ ನಿಯಮಗಳಿಗೆ ಒಳಪಟ್ಟಿದ್ದು ತಿರಸ್ಕೃತವಾದ ಅರ್ಜಿಗಳನ್ನು ಮರು ಪರಿಶೀಲನೆ ಮಾಡಲಾಗುವುದೇ?

ಇ) ಹಾಗಿದ್ದಲ್ಲಿ, ಮರು ಪರಿಶೀಲಿಸಲ್ಪಟ್ಟು ವಿಧವೆಯರ ಅರ್ಜಿಗಳ ಜಿಲ್ಲಾವಾರು ವಿವರಗಳನ್ನು ಒದಗಿಸುವುದು?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ವಿಧವಾ ವೇತನವನ್ನು ಮಂಜೂರು ಮಾಡಲು ಈ ಕೆಳಕಾಣಿಸಿದ ನಿಯಮಾವಳಿಗಳನ್ನು ಅಳವಡಿಸಲಾಗಿದೆ.

೧) ಮಹಿಳೆಯು ತನ್ನ ಪತಿಯನ್ನು ಕಳೆದುಕೊಂಡಿದ್ದು, ಪೋಷಕರಾರೂ ಇಲ್ಲವಳಾಗಿರಬೇಕು ಮತ್ತು ಆಕೆಯ ವಾರ್ಷಿಕ ಪರಮಾನವು ರೂ. ೧,೫೦೦ನ್ನು ಮೀರಬಾರದು.

೨) ವಿಧವೆಯು ೧೮ ವರ್ಷ ವಯಸ್ಸನ್ನು ದಾಟಿದವಳಾಗಿದ್ದು ಅವಳು ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿದ್ದು ಹಣದ ಸಹಾಯದ ಅವಶ್ಯಕತೆ ಇರಬೇಕು.

೩) ವಿಧವಾ ಮಹಿಳೆಯು ಅಂಗವಿಕಲರ ಪೋಷಣಾ ಭತ್ಯದ ಯೋಜನೆಯಡಿಯಲ್ಲಿ ಅಥವಾ ಇನ್ನೂ ಬೇರೆ ಯೋಜನೆಯಡಿಯಲ್ಲಿ ಫಲಾನುಭವಿಯಾಗಿದ್ದಲ್ಲಿ ಅಂತಹ ಮಹಿಳೆಯು ವಿಧವಾ ವೇತನವನ್ನು ಪಡೆಯಲು ಅರ್ಹಳಲ್ಲ.

೪) ಈ ಯೋಜನೆಯಡಿಯಲ್ಲಿ ಸಿಗುವ ಭತ್ಯವನ್ನು ವಿಧವಾ ಮಹಿಳೆಯು ತನ್ನ ಅಂತ್ಯಕಾಲದವರೆಗೆ ಅಥವಾ ಮತ್ತೊಮ್ಮೆ ವಿವಾಹವಾಗುವವರೆಗೆ ಅಥವಾ ವಾರ್ಷಿಕ ಪರಮಾನವು ರೂ.೧,೫೦೦ಕ್ಕೆ ಏರುವಂತಹ ಉದ್ಯೋಗ ಸಿಗುವವರೆಗೆ ಪಡೆಯಲು ಅರ್ಹಳಾಗಿರುತ್ತಾಳೆ.

೫) ಅರ್ಜಿದಾರಳು ಅಥವಾ ಆಕೆಯ ಗತಿಸಿದ ಪತಿಯು ಅರ್ಜಿಯನ್ನು ಸಲ್ಲಿಸಿದ ದಿನಾಂಕಕ್ಕೆ ಹಿಂದಿನ ಮೂರು ವರ್ಷಗಳಿಂದ ಈ ರಾಜ್ಯದ ನಿವಾಸಿಯಾಗಿರಬೇಕು.

೬) ಒಂದು ವೇಳೆ ಒಂದೇ ಮನೆತನದಲ್ಲಿ ಒಬ್ಬರಿಗಿಂತ ಹೆಚ್ಚು ನಿರ್ಗತಿಕ ವಿಧವೆಯರು ಇದ್ದಲ್ಲಿ ಅವರುಗಳೆಲ್ಲರೂ ಈ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ,

ಅ) ನಿಯಮಾವಳಿಗೆ ಬದ್ಧವಾಗಿರು ಎಲ್ಲಾ ಅರ್ಜಿಗಳಿಗೂ ಕಾನೂನಿನ ಪ್ರಕಾರ ವೇತನವನ್ನು ಮಂಜೂರು ಮಾಡಲಾಗುವುದು. ಒಂದು ವೇಳೆ ಅರ್ಹ ಅಭ್ಯರ್ಥಿಗಳ ಅರ್ಜಿಗಳು ತಿರಸ್ಕೃತವಾಗಿವೆ ಎಂದು ದೂರು ಬಂದರೆ ಅಂತಹ ಅರ್ಜಿಗಳನ್ನು ಮರುಪರಿಶೀಲಿಸಲಾಗುವುದು.

ಇ) ಅಂತಹ ಯಾವುದೇ ದೂರುಗಳು ಸ್ವೀಕೃತವಾಗಿಲ್ಲದ ಕಾರಣ ಜಿಲ್ಲಾವಾರು ಮಾಹಿತಿಯನ್ನು ಒದಗಿಸಲಾಗಿಲ್ಲ.

ಘಟಪ್ರಭಾ ಬಲದಂಡೆ ಕಾಲುವೆ.

೬೩೦. ಶ್ರೀ ಎಂ. ಎಲ್. ಮುತ್ತಣ್ಣವರ್ (ಗೋಕಾಕ್).—ಮಾನ್ಯ ಲೋಕೋಪಯೋಗಿ ಜಲಾಸಂಪನ್ಮೂಲ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಘಟಪ್ರಭಾ ಬಲದಂಡೆ ಕಾಲುವೆಯನ್ನು ಪೂರ್ಣಗೊಳಿಸಲು ಬೇಕಾಗುವ ಅವಧಿ ಎಷ್ಟು?

ಆ) ಸದರಿ ಕಾಲುವೆಯಿಂದ ರೈತರಿಗೆ ನೀರನ್ನು ಯಾವಾಗ ಒದಗಿಸಲಾಗುವುದು.

ಇ) ಮೇಲಿನ ಯೋಜನೆಯನ್ನು ಪೂರ್ಣಗೊಳಿಸಲು ತಗಲಬಹುದಾದ ಹಣದ ಮೊತ್ತವೆಷ್ಟು?

ಈ) ಈ ವರ್ಷ ಘಟಪ್ರಭಾ ಯೋಜನೆಗೆ ಕಡಿಮೆ ಹಣವನ್ನು ನೀಡಿರಲು ಕಾರಣಗಳೇನು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರ್ಣಗೊಳಿಸಲು ಯೋಚಿಸಲಾಗಿದೆ.

ಆ) ೧೯೮೪–೮೫ರಲ್ಲಿ ೧೨೯ ಹೆಕ್ಟೇರು ಪ್ರದೇಶಕ್ಕೆ ಅಗಲೇ ಒದಗಿಸಲಾಗಿದೆ. ಕಾಲುವೆ ಪೂರ್ಣಗೊಂಡಂತೆ ಮುಂದಿನ ಪ್ರದೇಶಗಳಿಗೆ ನೀರು ಬಿಡಲಾಗುವುದು.

ಇ) ಬಲದಂಡೆ ಕಾಲುವೆಯನ್ನು ಪೂರ್ಣಗೊಳಿಸಲು ತಗಲಬಹುದಾದ ವೆಚ್ಚ ೧೬೩ ಕೋಟಿ ರೂ.ಗಳು

ಈ) ಕಳೆದ ವರ್ಷ (೧೯೮೪–೮೫)ದಷ್ಟೇ ಈ ವರ್ಷವೂ (೧೯೮೫–೮೬) ಹಣವನ್ನು ಒದಗಿಸಲಾಗಿದೆ.